C.R.P.67

Form No.4 (Civil)
Deposition Sheets
(R.P.No.57)

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ

S.C. No.80/2022 ಸಿ. ಡಬ್ಲ್ಯೂ- 1 ಪಿ. ಡಬ್ಲ್ಯೂ -1

ದಿನಾಂಕ : 02.01.2024 ರಂದು ಪ್ರಮಾಣ ವಚನ ಬೋದಿಸಲಾಗಿದೆ

| | |
|---|---|
| ಸಾಕ್ಷಿದಾರರ ಹೆಸರು | ಹೇಮಲತಾ |
| ಗಂಡನ ಹೆಸರು | ಸತೀಶ |
| ವಯಸ್ಸು | 28 ವರ್ಷ |
| ಉದ್ಯೋಗ | ಗೃಹಿಣಿ |
| ವಾಸ | ಚಬ್ಬನಹಳ್ಳಿ ಗ್ರಾಮ |

ಮುಖ್ಯ ವಿಚಾರಣೆ : ಮಾನ್ಯ ಸರ್ಕಾರಿ ಅಭಿಯೋಜಕರಿಂದ :

1. ನನ್ನ ತಾಯಿ ಸರಸ್ವತಿ ಈಗ ಜೀವಂತವಾಗಿಲ್ಲ. ನಾನು ಚಿಕ್ಕ ಮಗುವಾಗಿದ್ದಾಗಲೇ ನನ್ನ ತಾಯಿ ಮೃತಪಟ್ಟಿರುತ್ತಾರೆ. ಚಾಸಾ-2 ನನ್ನ ಚಿಕ್ಕಮ್ಮ. ನನ್ನ ತಾಯಿ ಮೃತಪಟ್ಟ ನಂತರ ನನ್ನ ಚಿಕ್ಕಮ್ಮನಾದ ಚಾಸಾ-2 ನನ್ನನ್ನು ಸಾಕಿ ಸಲಹಿ ನನ್ನ ಮದುವೆ ಮಾಡಿರುತ್ತಾರೆ. ನನಗೆ ಚಾಸಾ-3 ರಿಂದ 6 ಗೊತ್ತು. ನನಗೆ ಆರೋಪಿಗಳು ಗೊತ್ತು. ಈ ದಿನ 1 ನೇ ಆರೋಪಿ ಮಾತ್ರ ನ್ಯಾಯಾಲಯಕ್ಕೆ ಬಂದಿರುತ್ತಾರೆ. 1 ಮತ್ತು 2 ನೇ ಆರೋಪಿಗಳು ಪರಸ್ಪರ ಗಂಡ ಹೆಂಡತಿಯರು. 1 ಮತ್ತು 2 ನೇ ಆರೋಪಿಗಳ ಮಗಳ ಹೆಸರು ಸುಜನ.

2. ಈ ಪ್ರಕರಣದ ಘಟನೆ ನೆಡಯುವ 20 ದಿನಗಳ ಮೊದಲು ತಾವು ಮನೆ ಕಟ್ಟುತ್ತಿದ್ದುದರಿಂದ ನನ್ನ ಚಿಕ್ಕಮ್ಮನಾದ ಚಾಸಾ-2 ನನ್ನನ್ನು ಸಿ. ಬಂಗಲಿ ಗ್ರಾಮದಲ್ಲಿರುವ ತಮ್ಮ ಮನೆಗೆ ಕರೆಸಿಕೊಂಡಿದ್ದರು. ನಾನು ನಮ್ಮ ಚಿಕ್ಕಮ್ಮನ ಮನೆಯಲ್ಲಿ ಅಡುಗೆ -ತಿಂಡಿ ಮಾಡಿಕೊಂಡು ಇದ್ದೆನು.

3. ದಿ: 30.05.2019 ರಂದು ನಾನು ನನ್ನ ಚಿಕ್ಕಮ್ಮನ ಮನೆಯಲ್ಲಿ ಇದ್ದೆನು. ಆಗ ನಮ್ಮ ಚಿಕ್ಕಮ್ಮ ತೋಟದ ಬಳಿ ಹೋಗಿದ್ದರು. ಸಂಜೆ ಸುಮಾರು 5.30 ರ ಸಮಯದಲ್ಲಿ ಯಾರೋ ಕೂಗಾಡಿದ ಶಬ್ದ ಕೇಳಿಸಿತು. ನನ್ನ ಚಿಕ್ಕಮ್ಮನು ಇನ್ನೂ ತೋಟದಿಂದ ಬಂದಿರಲಿಲ್ಲವಾದ್ದರಿಂದ ನಾನು ಮನೆಯಿಂದ ಸ್ವಲ್ಪ ದೂರ ಹೋಗಿ ನೋಡಿದೆ. ಅಲ್ಲಿ 1 ಮತ್ತು 2 ನೇ ಆರೋಪಿಗಳು ಹಾಗೂ ಅವರ ಮಗಳು ಸುಜನ ಇದ್ದರು. ಸದರಿ ಆರೋಪಿಗಳು ನನ್ನ ಚಿಕ್ಕಮ್ಮನಾದ ಚಾಸಾ-2 ರವರಿಗೆ ಹೊಡೆಯುತ್ತಿದ್ದರು. 1 ನೇ ಆರೋಪಿ ಮಚ್ಚಿನಿಂದ ನನ್ನ ಚಿಕ್ಕಮ್ಮನಿಗೆ ಹೊಡೆಯುತ್ತಿದ್ದರು. 1 ನೇ ಆರೋಪಿ ನಿನ್ನನ್ನು ಈ ದಿನ

ಬಿಡುವುದಿಲ್ಲ ಎಂದು ಮಚ್ಚಿನಿಂದ ಹೊಡೆಯಲು ಹೋದಾಗ ನನ್ನ ಚಿಕ್ಕಮ್ಮ ತಪ್ಪಿಸಿಕೊಳ್ಳಲು ಪ್ರಯತ್ನ ಪಟ್ಟಾಗ ಸದರಿ ಏಟು ಅವರ ಬಲಗೈ ಹಾಗೂ ಪಕ್ಕೆಗೆ ಬಿದ್ದಿತು. 1 ನೇ ಆರೋಪಿ ನನ್ನ ಚಿಕ್ಕಮ್ಮನಿಗೆ ಸೂಳೆ ಮುಂಡೆ, ನಾಯಿ ಮುಂಡೆ ಎಂದು ಅವಾಚ್ಯ ಶಬ್ದಗಳಿಂದ ಬೈದರು. 1 ಮತ್ತು 2 ನೇ ಆರೋಪಿಗಳು ಹಾಗೂ ಅವರ ಮಗಳು ಸುಜನ ತಮ್ಮ ಕೈಗಳಿಂದ ನಮ್ಮ ಚಿಕ್ಕಮ್ಮನ ಮುಖಕ್ಕೆ ಹೊಡೆದರು ಹಾಗೂ ನನ್ನ ಚಿಕ್ಕಮ್ಮ ಜುಟ್ಟನ್ನು ಹಿಡಿದುಕೊಂಡು ಎಳೆದಾಡಿದರು. ನಾನು ನನ್ನ ಚಿಕ್ಕಮ್ಮನನ್ನು ಬಿಡಿಸಲು ಹೋದಾಗ ಸದರಿ ಆರೋಪಿಗಳು ನಿನ್ನನ್ನು ಬಿಡುವುದಿಲ್ಲ ಎಂದು ನನಗೆ ಜೀವ ಬೆದರಿಕೆ ಹಾಕಿದರು. ಚಾಸಾ-3 ಮತ್ತು 4 ರಂಗನಾಥ ಹಾಗೂ ಶಂಕರೇಗೌಡ ಬಂದು ಮಚ್ಚನ್ನು ಕಿತ್ತುಕೊಂಡು ಗಲಾಟೆ ಬಿಡಿಸಿದರು. ಆಗ ಆರೋಪಿ ಅಶೋಕ ಕುಮಾರನು ನನ್ನ ಚಿಕ್ಕಮ್ಮನನ್ನು ಕುರಿತು ನಿನ್ನನ್ನು ಇವತ್ತು ಬಿಡುತ್ತಿರಲಿಲ್ಲ ಇವರು ಬಂದಿದ್ದರಿಂದ ಬಿಡುತ್ತೇನೆ ಎಂದು ಬೆದರಿಕೆ ಹಾಕಿದರು.

4. ನನ್ನ ಚಿಕ್ಕಮ್ಮನ ಕೈ ಕಾಲು ಹಾಗೂ ದೇಹದ ಇತರೆ ಭಾಗಗಳಿಂದ ರಕ್ತ ಬರುತ್ತಿತ್ತು. ರಂಗನಾಥ ಮತ್ತು ಶಂಕರೇಗೌಡ ಫೋನ್ ಮಾಡಿ ಆಂಬುಲೆನ್ಸ್ ಕರೆಸಿ ನನ್ನ ಚಿಕ್ಕಮ್ಮನನ್ನು ಆದಿಚುಂಚನಗಿರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಸೇರಿಸಿದರು. ನಂತರ ನನ್ನ ಚಿಕ್ಕಮ್ಮನನ್ನು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಲಾಯಿತು. ಆರೋಪಿಗಳು ಹಾಗೂ ನನ್ನ ಚಿಕ್ಕಮ್ಮ ನಡುವೆ ಘಟನೆಗೂ 9 ವರುಷಗಳ ಹಿಂದಿನಿಂದ ಜಮೀನಿನ ವಿಚಾರದಲ್ಲಿ ದ್ವೇಷವಿದ್ದುದರಿಂದ ಆರೋಪಿಗಳು ಈ ರೀತಿ ನನ್ನ ಚಿಕ್ಕಮ್ಮನಿಗೆ ಹೊಡೆದಿರುತ್ತಾರೆ. ಘಟನೆಯ ದಿನ ಹಾಗೂ ಮರುದಿನ ನಮ್ಮ ಚಿಕ್ಕಮ್ಮನನ್ನು ಆಸ್ಪತ್ರೆಗೆ ಸೇರಿಸಲು ಓಡಾಡುತ್ತಿದುದರಿಂದ ಘಟನೆಯ ದಿನವೇ ಪೊಲೀಸರಿಗೆ ದೂರು ಕೊಡಲು ಆಗಲಿಲ್ಲ. ಘಟನೆಯಾದ 2 ದಿನಗಳ ನಂತರ ನಾನು ಪೊಲೀಸ್ ಠಾಣೆಗೆ ಹೋಗಿ ಆರೋಪಿಗಳ ವಿರುದ್ಧ ಪೋಲಿಸರಿಗೆ ದೂರು ನೀಡಿರುತ್ತೇನೆ. ದೂರನ್ನು ಹಾಗೂ ಅದರಲ್ಲಿರುವ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ದೂರನ್ನು ನಿಪಿ.1 ಎಂದೂ, ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು.

5. ನಾನು ದೂರು ಕೊಟ್ಟ ದಿನವೇ ಪೋಲಿಸರು ನಾನು ತೋರಿಸಿದ ಘಟನಾಸ್ಥಳಕ್ಕೆ ಬಂದು ಮಹಜರು ಮಾಡಿದರು. ಘಟನಾಸ್ಥಳವು ಸಿ. ಬಂಗಲಿ ಗ್ರಾಮದ ತೊರೆಗೆ ಹೋಗುವ ಜಾಗವಾಗಿತ್ತು. ಮಹಜರು ಕಾಲದಲ್ಲಿ ಶಂಕರೇಗೌಡರು, ಹರೀಶ, ಪವನ ಇವರುಗಳು ಇದ್ದರು. ಪವನ ಎನ್ನುವ ವ್ಯಕ್ತಿ ಒಂದು ವರುಷದ ಹಿಂದೆ ರಸ್ತೆ ಅಪಘಾತದಲ್ಲಿ ಮೃತಪಟ್ಟಿರುತ್ತಾರೆ. ಘಟನಾಸ್ಥಳದಲ್ಲಿ ಕೃತ್ಯಕ್ಕೆ ಉಪಯೋಗಿಸಿದ ಮಚ್ಚನ್ನು ನಾನು ಪೊಲೀಸರಿಗೆ ಕೊಟ್ಟಿದ್ದನ್ನು ಪೊಲೀಸರು ತೆಗೆದುಕೊಂಡಿರುತ್ತಾರೆ. ರಕ್ತವಾಗಿದ್ದ ನನ್ನ ಚಿಕ್ಕಮ್ಮನ ಸೀರೆ ಮತ್ತು ರವಿಕೆಯನ್ನು ನಾನು ಕೊಟ್ಟಿದ್ದನ್ನು ಪೋಲಿಸರು ತೆಗೆದುಕೊಂಡಿರುತ್ತಾರೆ. ಸದರಿ ಮಹಜರನ್ನು ಪೊಲೀಸರು ಮ.3.00 ರಿಂದ ಸಂಜೆ ಸುಮಾರು 5.00

ಗಂಟೆವರೆಗೂ ಮಾಡಿರುತ್ತಾರೆ. ಸದರಿ ಮಹಜರಿಗೆ ನಾನು ಸಹಿ ಮಾಡಿರುತ್ತೇನೆ. ಸ್ಥಳ ಮಹಜರನ್ನು ಹಾಗೂ ಅದರಲ್ಲಿರುವ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಸ್ಥಳ ಮಹಜರನ್ನು ನಿಪಿ.2 ಎಂದೂ, ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು.

6. ಮಚ್ಚು ಹಾಗೂ ಬಟ್ಟೆಗಳನ್ನು ನೋಡಿದರೆ ಗುರುತಿಸಬಲ್ಲೆ. (ಸೀಲಾದ ಪ್ಯಾಕೆಟ್ಟುಗಳನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲಾಯಿತು). ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮಚ್ಚನ್ನು ನೋಡಿ ಗುರುತಿಸಿದ್ದು, ಇದನ್ನು ಎಂಒ-1 ಎಂದೂ ಸೀರೆಯನ್ನು ನೋಡಿ ಗುರುತಿಸಿದ್ದು, ಇದನ್ನು ಎಂಒ-2 ಎಂದೂ ರವಿಕೆಯನ್ನು ನೋಡಿ ಗುರುತಿಸಿದ್ದು, ಇದನ್ನು ಎಂಒ-3 ಎಂದು ಗುರುತಿಸಲಾಯಿತು. 2 ನೇ ಆರೋಪಿ ಹಾಗೂ ಸುಜನ ರವರನ್ನು ನೋಡಿದರೆ ಗುರುತಿಸಬಲ್ಲೆ .

7. ದೂರು ಕೊಡುವ ಸಮಯದಲ್ಲಿ ನನ್ನ ಚಿಕ್ಕಮ್ಮನ ಆಸ್ಪತ್ರೆಗೆ ಕರೆದುಕೊಂಡು ಹೋದರು ಎಂದು ಹೇಳುವ ಬದಲು ಗಾಬರಿಯಿಂದ ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರು ಎಂದು ತಪ್ಪಾಗಿ ಹೇಳಿದ್ದು ಆ ಬಗ್ಗೆ ನಾನು ಪುನಃ ಹೇಳಿಕೆ ನೀಡಿರುತ್ತೇನೆ. ಇದು ಅಲ್ಲದೇ ನಾನು ಮರು ಹೇಳಿಕೆಯ ಸಮಯದಲ್ಲಿ ಬೇರೆ ಯಾವುದೇ ವಿಚಾರವನ್ನು ಹೇಳಿರುವುದಿಲ್ಲ.

ಪಾಟೀ ಸವಾಲು : ಆರೋಪಿ ಪರವಾಗಿ ಶ್ರೀ. ಎಸ್ ಪಿ ವಕೀಲರಿಂದ :

8. ನನ್ನ ತಂದೆಯ ಹೆಸರು ರವಿ ಕುಮಾರ್. ನಮ್ಮ ತಂದೆಯ ಊರು ಅಂಬರಜೀರ ಹಳ್ಳಿ. ನನ್ನ ತಂದೆಗೆ ನಾನು ಒಬ್ಬಳೇ ಮಗಳು. ನನ ತಂದೆಯೇ ನನ್ನ ಮದುವೆ ಮಾಡಿರುತ್ತಾರೆ ಹಾಗೂ ನನ್ನ ಕಷ್ಟ ಸುಖಗಳನ್ನು ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿಯಲ್ಲ. ನನಗೆ 12 ವರುಷದ ಒಬ್ಬ ಮಗ ಹಾಗೂ 10 ವರುಷದ ಇನ್ನು ಒಬ್ಬ ಮಗ ಇದ್ದಾರೆ. ನಾನು ಚಬ್ಬನಹಳ್ಳಿಯ ಸರ್ಕಾರಿ ಶಾಲೆಗೆ ನನ್ನ ಮಕ್ಕಳನ್ನು ಸೇರಿಸಿರುತ್ತೇನೆ. ನನ್ನ ದೊಡ್ಡ ಮಗನನ್ನು 2015 ರಲ್ಲಿ ನಾನು ಶಾಲೆಗೆ ಸೇರಿಸಿರುತ್ತೇನೆ. ನನ್ನ 2 ನೇ ಮಗನನ್ನು 2016 ರಲ್ಲಿ ನಾನು ಶಾಲೆಗೆ ಸೇರಿಸಿರುತ್ತೇನೆ.

9. ಚಬ್ಬನಹಳ್ಳಿಯಿಂದ ಸಿ. ಬಂಗಲಿ ಗ್ರಾಮ 7-8 ಕಿಮಿ ದೂರದಲ್ಲಿದೆ. ನನ್ನ ಮಕ್ಕಳ ವಿದ್ಯಾಭ್ಯಾಸ್ಯದ ಉಸ್ತುವಾರಿಯನ್ನು ನಾನೇ ನೋಡಿಕೊಳ್ಳುತ್ತೇನೆ ಎಂದರೆ ಸರಿ. ನಾನು ಅವಶ್ಯಕತೆ ಇದ್ದಾಗ ನಾನು ನನ್ನ ಚಿಕ್ಕಮ್ಮನ ಮನೆಗೆ ಹೋಗಿ ಬಂದು ಮಾಡುತ್ತೇನೆ ಎಂದರೆ ಸರಿ.

10. ನನ್ನ ಚಿಕ್ಕಮ್ಮನ ಮನೆಯ ಎದುರು ಭಾಗದಲ್ಲಿ ಆರೋಪಿಗಳ ಮನೆ ಇದೆ. ಗಲಾಟೆಯಾದ ಸ್ಥಳ ನನ್ನ ಚಿಕ್ಕಮ್ಮನ ಮನೆ ಅರ್ಧ ಕಿಮಿ ದೂರಕ್ಕಿಂತಲೂ ಕಡಿಮೆ ದೂರದಲ್ಲಿದ್ದು, ಸದರಿ ಸ್ಥಳದಲ್ಲಿ ಜೋರಾಗಿ ಮಾತನಾಡಿದರೆ ನನ್ನ ಚಿಕ್ಕಮ್ಮನ ಮನೆಗೆ ಕೇಳಿಸುವಂತಿತ್ತು. ಘಟನೆ ಆಯಿತು ಎಂದು ಹೇಳುವ ರಸ್ತೆ ಕಲ್ಲುಗಳಿಂದ ಕೂಡಿದ ರಸ್ತೆ ಎಂದರೆ ಸರಿಯಲ್ಲ.

11. ಘಟನೆಯ ದಿನ ನನ್ನ ಚಿಕ್ಕಮ್ಮ ಮನೆಯಿಂದ ತೋಟಕ್ಕೆ ಹೊರಟಾಗ ಸಂಜೆ 5.00 ಗಂಟೆಯಾಗಿತ್ತು. ಆ ಸಮಯದಲ್ಲಿ ತೋಟಕ್ಕೆ ಹೋಗಿ ಬರುವ ಜನರು ಯಾರೂ ಆ ರಸ್ತೆಯಲ್ಲಿ ಓಡಾಡುತ್ತಿರಲ್ಲಿ , ಟ್ರಾಕ್ಟರ್ ಗಳು ಮಾತ್ರ ಓಡಾಡುತ್ತಿದ್ದವು. ಯಾರೋ ಕಿರುಚುವ ಶಬ್ದ ಕೇಳಿದ 5 ನಿಮಿಷದಲ್ಲಿ ನಾನು ಘಟನಾಸ್ಥಳಕ್ಕೆ ಹೋಗಿದ್ದೆ. ನನ್ನ ಜೊತಗೆ ಯಾರೂ ಘಟನಾಸ್ಥಳಕ್ಕೆ ಬರಲಿಲ್ಲ, ಆದರೆ ನಾನು ಘಟನಾಸ್ಥಳಕ್ಕೆ ಹೋದ ನಂತರ ಸಾಕ್ಷಿ ರಂಗನಾಥ ಮತ್ತು ಶಂಕರೇಗೌಡ ಸ್ಥಳಕ್ಕೆ ಬಂದರು.

12. ನಾನು ಸ್ಥಳಕ್ಕೆ ಹೋಗುವಷ್ಟರಲ್ಲಿ ಹೊಡೆದಾಟ ಕಿರುಚಾಟ ನಡೆಯುತ್ತಿತ್ತು. ಆ ಸಮಯದಲ್ಲಿ ಆರೋಪಿ ಅಶೋೕಕ್ ಕಮಾರ್ ರವರಿಗೆ ಅವರ ಕೈಕಾಲುಗಳಿಂದ ರಕ್ತ ಬರುತ್ತಿರಲಿಲ್ಲ. ಘಟನಾಸ್ಥಳದಲ್ಲಿ ನಾನು ಸುಮಾರು ಆರ್ಧ ಗಂಟೆಯ ಕಾಲ ಇದ್ದೆನು. ಘಟನಾಸ್ಥಳಕ್ಕೆ ರಂಗನಾಥ ಹಾಗೂ ಶಂಕರೇಗೌಡ ಅಲ್ಲದೇ ಆ ಸಮಯದಲ್ಲಿ ಬೇರೆ ಯಾರೂ ಬಂದಿರಲಿಲ್ಲ. ಘಟನೆಯ ಸಮಯದಲ್ಲಿ ನಾನು ಕೂಗಿಕೊಳ್ಳುತ್ತಿದ್ದೆ. ಆ ಸಮಯದಲ್ಲಿ ಗ್ರಾಮದ ಬೇರ ಯಾವ ಜನರು ಸ್ಥಳಕ್ಕೆ ಬಂದಿರುವುದಿಲ್ಲ.

13. ಘಟನಾಸ್ಥಳಕ್ಕೆ ಆಂಬುಲೆನ್ಸ್ ಬಂದಾಗ 5-.30 ರಿಂದ 6.00 ಗಂಟೆ ಆಗಿದ್ದಿರಬಹುದು ನಾನು ಗಾಬರಿಯಲ್ಲಿ ನಾನು ಸಮಯವನ್ನು ಗಮನಿಸಲಿಲ್ಲ. ಘಟನಾಸ್ಥಳದಿಂದ ಆದಿಚುಂಚನಗಿರಿ ಆಸ್ಪತ್ರೆ 7-8 ಕಿಮಿ ದೂರದಲ್ಲಿದೆ. ಆದಿಚುಂಚನಗಿರಿ ಆಸ್ಪತ್ರೆಗೆ ನನ್ನ ಚಿಕ್ಕಮ್ಮನನ್ನು ಮೊದಲ ಬಾರಿಗೆ ಕರೆದುಕೊಂಡು ಹೋದಾಗ ಸಂಜೆ 6.30 ರಿಂದ 7.00 ಗಂಟೆ ಸಮಯವಾಗಿದ್ದಿತು. ಸದರಿ ಆಸ್ಪತ್ರೆಯ ವಿವಿಧ ಭಾಗಗಳಲ್ಲಿ ನನ್ನ ಚಿಕ್ಕಮ್ಮನಿಗ ಚಿಕಿತ್ಸೆ ಕೊಟ್ಟರು. ನನ್ನ ಚಿಕ್ಕಮ್ಮನಿಗೆ ಚಿಕಿತ್ಸೆ ಕೊಟ್ಟಾಗ ಸಮಯ ಎಷ್ಟಾಗಿತ್ತು ಎಂದು ನಾನು ಗಾಬರಿಯಲ್ಲಿ ಗಮನಿಸಲಿಲ್ಲ.

14. 1ನೇ ಆರೋಪಿ ಅಶೋಕ ಕುಮಾರ ಆ ದಿನ ಸಂಜೆ 5.30 ರ ಸಮಯದಲ್ಲಿ ಆದಿಚುಂಚನಗಿರಿ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಪುನಃ ನುಡಿಯುವುದೇನೆಂದರೆ 1ನೇ ಆರೋಪಿ ನನ್ನ ಚಿಕ್ಕಮ್ಮನಿಗೆ ಹೊಡೆದು ತಾವೇ ಮೊದಲು ಉದ್ದೇಶಪೂರ್ವಕವಾಗಿ ಓಡಿಹೋಗಿ ಆಸ್ಪತೆಗೆ ದಾಖಲಾಗಿರುತ್ತಾರೆ.

15. 2 ನೇ ಆರೋಪಿ ಗಿರಿಜಾ ಸಿ. ಬಂಗಲಿ ಗ್ರಾಮದ ಅಂಗನವಾಡಿಯಲ್ಲಿ ಶಿಕ್ಷಕಿಯಾಗಿ ಕೆಲಸ ಮಾಡಿಕೊಂಡಿರುತ್ತಾರೆ ಎಂದರೆ ಸರಿ. 2 ನೇ ಆರೋಪಿ ಪ್ರತಿದಿನ ಎಷ್ಟು ಹೊತ್ತಿಗೆ ಅಂಗನವಾಡಿಗೆ ಹೋಗಿ ಕೆಲಸ ಮುಗಿಸಿ ಎಷ್ಟು ಹೊತ್ತಿಗೆ ಮನೆಗೆ ಬುರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಸ್ವತಃ ನುಡಿಯುವುದೇನೆಂದರೆ ಘಟನೆಯ ದಿನ ರಜೆ ಹಾಕಿದ್ದರೋ ಏನೋ ನನಗೆ ಗೊತ್ತಿಲ್ಲ. ಆ ದಿನ 2 ನೇ ಆರೋಪಿ ಮನೆಯಲ್ಲಿ ಇದ್ದರೆಂದು ನುಡಿದಿದ್ದಾರೆ.

16. 1 ಮತ್ತು 2 ನೇ ಆರೋಪಿಗಳ ಮಗಳಾದ ಸುಜನಾಳಿಗೆ ಮದುವೆಯಾಗಿದೆ ಎಂದರೆ ಈಗ ಆಗಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ ಆದರೆ ಘಟನೆಯ ಸಮಯದಲ್ಲಿ ಆಕೆಯ ಮದುವೆಯಾಗಿರಲಿಲ್ಲ ಎಂದು ಸಾಕ್ಷಿ ನುಡಿದಿದ್ದಾರೆ. ಘಟನೆಯ ದಿನ ಸುಜನ ಪರೀಕ್ಷೆ ಬರೆಯಲು ಕಾಲೇಜಿಗೆ ಹೋಗಿದ್ದಳು ಎಂದರೆ ಸರಿಯಲ್ಲ. ಆ ಬಗ್ಗೆ ದಾಖಲೆಗಳನ್ನು ಆರೋಪಿಗಳು ಸೃಷ್ಟಿಸಿರುತ್ತಾರೆ ಎಂದು ಸಾಕ್ಷಿ ಸ್ವತಃ ನುಡಿದಿದ್ದಾರೆ. ಸುಜನ ಯಾವ ಕಾಲೇಜಿಗೆ ಹೋಗುತ್ತಿದ್ದಳು ಹಾಗೂ ಎಷ್ಟು ಹೊತ್ತಿಗೆ ಹೋಗುತ್ತಿದ್ದಳು ಎನ್ನುವ ವಿಚಾರ ನನಗೆ ಗೊತ್ತಿಲ್ಲ. ದಿಃ30.04.2019 ರಂದು ಸದರಿ ಸುಜನ ಚೆನ್ನರಾಯಪಟ್ಟಣದ ಪ್ರಥಮ ದರ್ಜೆ ಆದಿಚುಂಚನಗಿರಿ ಕಾಲೇಜಿನಲ್ಲಿ ಮ.1.45 ರಿಂದ 5.00 ಗಂಟೆವರೆಗೂ ಪರೀಕ್ಷೆ ಬರೆದಿರುತ್ತಾಳೆ ಎಂದರೆ ಸರಿಯಲ್ಲ.

17. ಬಿಂಡಿಗನವಿಲೆ ಪೊಲೀಸ್ ಠಾಣೆಗೆ ನನ್ನನ್ನು ಯಾರೂ ಕರೆದುಕೊಂಡು ಹೋಗಿರಲಿಲ್ಲ. ನಾನೇ ಸ್ವತಃ ಹೋಗಿದ್ದೆ. ಸದರಿ ಠಾಣೆಗೆ ದೂರು ಕೊಡಬೇಕು ಎಂದು ನನಗೆ ಗೊತ್ತಿತ್ತು. ಬಿಂಡಿಗನವಿಲೆ ಪೊಲೀಸ್ ಠಾಣೆಗೆ ದೂರು ಕೊಡಲು ನಾನು ಮಧ್ಯಾಹ್ನದ ಸಮಯದಲ್ಲಿ ಹೋಗಿದ್ದು, ಸಮಯ ನನಗೆ ನಿಖರವಾಗಿ ನೆನಪಿಲ್ಲ. ನಾನು ಠಾಣೆಗೆ ಹೋದ ನಂತರ ದೂರನ್ನು ಬರೆದುಕೊಂಡರು. ದೂರನ್ನು ನಾನೇ ಬರೆದಿರುತ್ತೇನೆ. ನಾನು ದೂರನ್ನು ಬರೆಯಲು ಪ್ರಾರಂಬಿಸಿದಾಗ ಸಮಯ ಎಷ್ಟಾಗಿತ್ತು ಹಾಗೂ ಅದನ್ನು ಬರೆದು ಮುಗಿಸಿದಾಗ ಎಷ್ಟು ಸಮಯವಾಗಿತ್ತು ಎಂದು ನಾನು ಗಾಬರಿಯಲ್ಲಿ ಗಮನಿಸಲಿಲ್ಲ. ಬಿಂಡಿಗನವಿಲೆ ಪೊಲೀಸ್ ಠಾಣೆಯಲ್ಲಿ ನಾನು ಒಂದೂವರೆಯಿಂದ ಎರಡೂ ಗಂಟೆಗಳ ಕಾಲ ಇದ್ದೆನು. ಪೊಲೀಸ್ ಠಾಣೆಗೆ ಹೋಗುವಾಗ ರಕ್ತವಾಗಿದ್ದ ನನ್ನ ಚಿಕ್ಕಮ್ಮನ ಬಟ್ಟೆಗಳನ್ನು ತೆಗೆದುಕೂಂಡು ಹೋಗಿರಲಿಲ್ಲ.

18. ಪೊಲೀಸ್ ಠಾಣೆಯಲ್ಲಿ ನಾನು ದೂರಿಗೆ ಒಂದು ಸಹಿಯನ್ನು ಮಾತ್ರ ಮಾಡಿರುತ್ತೇನೆ. ದೂರು ಕೊಡಲು ನಾನು ಠಾಣೆಗೆ ಹೋದ ನಂತರ ನಾನು ಪುನಃ ಆಸ್ಪತ್ರೆಗೆ ಹೋಗಿರಲಿಲ್ಲ, ಏಕೆಂದರೆ ಮಹಜರು ಮಾಡಲು ನನ್ನನ್ನು ಸ್ಥಳಕ್ಕೆ ಕರೆದುಕೊಂಡು ಹೋಗಿದ್ದರು. ನಾನು ದೂರು ಕೊಟ್ಟ ನಂತರ ಆಸ್ಪತ್ರೆಯಿಂದ ಸಿ. ಬಂಗಲಿ ಗ್ರಾಮಕ್ಕೆ ಬೇರೆಯವರು ಬಂದಿರುವುದಿಲ್ಲ.

19. ಪೊಲೀಸರು ಮಹಜರಿಗೆ ಬರುವಾಗ ತಮ್ಮ ಜೊತೆಗೆ ಹರೀಶ ಹಾಗೂ ಪವನ ರವರನ್ನು ಕರೆದುಕೊಂಡು ಬಂದಿರಲಿಲ್ಲ. ತೋಟದ ಬಳಿ ಇದ್ದ ಸದರಿ ಹರೀಶ ಹಾಗೂ ಪವನ್ ರವರನ್ನು ಮಹಜರಿಜಗೆ ಸ್ಥಳಕ್ಕೆ ಕರೆದಿರುತ್ತಾರೆ. ಮಹಜರು ಮಾಡಿದ ಸ್ಥಳ ಸಾಮಾನ್ಯವಾಗಿ ಜನರು ಓಡಾಡುವ ಸ್ಥಳ, ಆದರೆ ಆ ದಿನ ಅಲ್ಲಿ ಯಾರೂ ಒಡಾಡುತ್ತಿರಲಿಲ್ಲ.

20. ಎಂಒ-1 ಮಚ್ಚಲ್ಲ ಕುಡುಗೋಲು ಎಂದರೆ ಸರಿಯಲ್ಲ. ಎಂಒ-1 ಗಲಾಟೆಯಾದ ಜಾಗದಲ್ಲಿ ಅಂದರೆ ಅಲ್ಲಿದ್ದ ಬೇಲಿಯಲ್ಲಿ ಇದ್ದಿತು. ಸದರಿ ಬೇಲಿ ಗಲಾಟೆಯಾದ ಜಾಗದ ಯಾವ ದಿಕ್ಕಿನಲ್ಲಿದೆ ಎಂದು ನಾನು ಹೇಳಲಾರೆ. ಆಂಬುಲೆನ್ಸ್ ನಲ್ಲಿ ನಮ್ಮ ಚಿಕ್ಕಮ್ಮನನ್ನು ಕರೆದುಕೊಂಡು ಹೋಗುವಾಗ ಘಟನೆಯಿಂದಾಗಿ ಚದುರಿದ್ದ ನಮ್ಮ ಚಿಕ್ಕಮ್ಮ ಧರಿಸಿದ್ದ ಸೀರೆ ಮತ್ತು ರವಿಕೆಯನ್ನು ಬದಲಾಯಿಸಿ ಬೇರೆ ಬಟ್ಟೆ ಹಾಕಿಕೊಂಡು ನನ್ನ ಚಿಕ್ಕಮ್ಮ ಆಂಬುಲೆನ್ಸ್ ನಲ್ಲಿ ಆಸ್ಪತ್ರೆಗೆ ಕೆರದುಕೊಂಡು ಹೋದರು. ಸಾಕ್ಷಿ ಪುನಃ ನುಡಿಯುವುದೇನೆಂದರೆ ಎಂಒ-2 ಮತ್ತು 3 ಬಟ್ಟೆಗಳನ್ನು ಆಂಬುಲೆನ್ಸ್ ನಲ್ಲಿ ಆಸ್ಪತ್ರೆಗೆ ತೆಗದುಕೊಂಡು ಹೋದರು. ನಂತರ ಅವುಗಳನ್ನು ನಾನು ಆಸ್ಪತ್ರೆಯಿಂದ ತಂದು ಮಹಜರು ಕಾಲದಲ್ಲಿ ಪೋಲಿಸರಿಗೆ ಕೊಟ್ಟಿರುತ್ತೇನೆ.

21. ನಾನು ಪೊಲೀಸರಿಗೆ ನಿಪಿ-1 ರಂತೆ ದೂರು ಕೊಟ್ಟಿಟುವುದಿಲ್ಲ ಹಾಗೂ ಪೊಲೀಸರು ಸ್ಥಳಕ್ಕೆ ಬಂದು ನಾನು ಹೇಳಿದಂತೆ ಮಹಜರು ಮಾಡಿ ಎಂಒ-1 ರಿಂದ 3 ನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಎಎಂಒ-1 ರಿಂದ 3 ನ್ನು ಈ ಕೇಸಿಗಾಗಿ ನಾನೇ ಸೃಷ್ಟಿಸಿ ಠಾಣೆಗೆ ತೆಗೆದುಕೊಂಡು ಹೋಗಿ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಮಹಜರನ್ನು ಠಾಣೆಯಲ್ಲಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ.

22. ಜಮೀನಿನ ವಿವಾದದ ಬಗ್ಗೆ ನನ್ನ ಚಿಕ್ಕಮ್ಮ ಹಾಗೂ ಆರೋಪಿಗಳ ನಡುವೆ ನ್ಯಾಯಾಲಯಗಳಲ್ಲಿ 5-6 ಕೇಸುಗಳು ನಡೆಯುತ್ತಿವೆ. ನಾಗಮಂಗಲದಲ್ಲಿ ನಡಯತ್ತಿದ್ದ ಎಲ್ಲಾ ಪ್ರಕರಣಗಳಲ್ಲಿ ಆರೋಪಿಗಳು ಹಾಗೂ ನನ್ನ ಚಿಕ್ಕಮ್ಮ ರಾಜಿ ಮಾಡಿಕೊಂಡು ಮುಕ್ತಾಗೊಳಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ.

23. ದಿಃ30.05.2019 ರಂದು ಆರೋಪಿಗಳು ಹಾಗೂ ನನ್ನ ಚಿಕ್ಕಮ್ಮನ ನಡುವೆ ಯಾವುದೇ ಗಲಾಗೆಯಾಗಿಲ್ಲ, ನಾನು ಯಾವುದೇ ಘಟನೆ ನೋಡಿಲ್ಲವಾದರೂ ನಾನು ಆ ಬಗ್ಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಶಬ್ದ ಕೇಳಿ ನಾನು ಘಟನಾಸ್ಥಳಕ್ಕೆ ಹೋದಾಗ ಅಲ್ಲಿ ಆರೋಪಿಗಳು ನನ್ನ ಚಿಕ್ಕಮ್ಮನಿಗೆ ಅವಾಚ್ಯ ಶಬ್ದಗಳಿಂದ ಬೈದು ಮಚ್ಚಿನಿಂದಿ ಹಾಗೂ ಕೈಗಳಿಂದ ಹೊಡೆದ ಘಟನೆ ನೆಡದಿಲ್ಲ

ಎಂದರೆ ಸರಿಯಲ್ಲ. ಆ ದಿನ 2 ನೇ ಆರೋಪಿ ಮತ್ತು ಅವರ ಮಗಳು ಸುಜನ ಘಟನಾ ಸ್ಥಳದಲ್ಲಿ ಇದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಶಂಕರೇಗೌಡ ಹಾಗೂ ರಂಗನಾಥ ಸ್ಥಳಕ್ಕೆ ಬಂದು ನನ್ನ ಚಿಕ್ಕಮ್ಮನನ್ನು ಆಂಬುಲೆನ್ಸ್ ಗೆ ಹಾಕಿ ಆಸ್ಪತ್ರೆಗೆ ಕರೆದುಕೊಂಡು ಹೋದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನಾಗಲೀ, ಸದರಿ ರಂಗನಾಥ ಅಥವಾ ಶಂಕರೇಗೌಡರಾಗಲೀ ನನ್ನ ಚಿಕ್ಕಮ್ಮನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುವುದಿಲ್ಲ ಎಂದರೆ ಸರಿಯಲ್ಲ.

24. ನನ್ನ ಚಿಕ್ಕಮ್ಮನನ್ನು ನಾನು ಬಿಡಿಸಲು ಹೋದಾಗ ಆರೋಪಿಗಳು ನಿನ್ನನ್ನು ಬಿಡುವುದಿಲ್ಲ ಎಂದು ನನಗೆ ಬೆದರಿಕೆ ಹಾಕಿದರು ಎನ್ನುವ ವಿಚಾರವನ್ನು ನಾನು ಇದೇ ಮೊದಲ ಬಾರಿಗೆ ಹೇಳುತ್ತಿದ್ದೇನೆ ಎಂದರೆ ಸಾಕ್ಷಿ ನಾನು ಸದರಿ ವಿಚಾರವನ್ನು ಗಾಬರಿಯಿಂದ ದೂರಿನಲ್ಲಿ ಬರೆದಿರುವುದಿಲ್ಲ ಎಂದು ನುಡಿದಿದ್ದಾರೆ. ಘಟನೆಯ ದಿನ ಆರೋಪಿಗಳು ನನ್ನ ಚಿಕ್ಕಮ್ಮನನ್ನು ಕುರಿತು ನಿನ್ನನ್ನು ಬಿಡುತ್ತಿರಲಿಲ್ಲ ಇವರೆಲ್ಲಾ ಬಂದಿದ್ದಾರೆ ಎಂದು ಬಿಡುತ್ತಿದ್ದೇನೆ ಎಂದು ಬೆದರಿಕೆ ಹಾಕಿದರು ಎನ್ನುವ ವಿಚಾರವನ್ನು ನಾನು ಇದೇ ಮೊದಲ ಬಾರಿಗೆ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

25. ನನ್ನ ಮುಂದುವರೆದ ಹೇಳಿಕೆಯಲ್ಲಿ ಏನು ಬರೆದುಕೊಂಡಿದ್ದಾರೆ ಎಂದು ಪೊಲೀಸರು ನನಗೆ ತೋರಿಸಿರುವುದಿಲ್ಲ. ನಮ್ಮ ಚಿಕ್ಕಮ್ಮ ತನ್ನ ಜವಾಬ್ದಾರಿಯಿಂದ ನನ್ನ ಮದುವೆ ಮಡಿರುತ್ತಾರೆ ಎಂದು ನಾನು ನನ್ನ ಚಿಕ್ಕಮ್ಮನ ಮನೆಗೆ ಆಗಾಗ ಹೋಗಿ ಬಂದು ಮಾಡುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಚಿಕ್ಕಮ್ಮ ಮನೆ ರಿಪೇರಿ ಮಾಡಿಸುವ ಸಲುವಾಗಿ ನನ್ನನ್ನು ಕರೆಸಿಕೊಂಡಿರಲಿಲ್ಲ ಹಾಗೂ ನಾನು ಹೇಳಿದ ಯಾವುದೇ ಘಟನೆಯನ್ನು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತಹ ಯಾವುದೇ ಘಟನೆ ನೆಡದಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ</u> ಏನೂ ಇಲ್ಲ

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಬಿ.ಜಿ.ರಮಾ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.